**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ ನಂ. 1402/2024**

| | | | |
|---|---|---|---|
| **ಹೆಸರು** | : | **ಶಕುನಾಬಾಯಿ** | ಚಾ.ಸಾ.1 |
| **ಗಂಡನ ಹೆಸರು** | : | **ಸುನೀಲ** | ಪ್ರಾ.ಸಾ.1 |
| **ವಯಸ್ಸು** | : | **26 ವರ್ಷ** | ದಿನಾಂಕಃ 11-08-2025 |
| **ಉದ್ಯೋಗ** | : | **ಗೃಹಿಣಿ** | |
| **ವಾಸಸ್ಥಳ** | : | **ರುಸ್ತಾಂಪುರ ತಾಂಡಾ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಚಾಸಾ-4 ನನ್ನ ಗಂಡ. ಚಾಸಾ-5 ನನ್ನ ನಾದಿನಿ. ಚಾಸಾ-8 ನನ್ನ ಅಜ್ಜಿ. ಚಾಸಾ-6 ಮತ್ತು 7 ರವರು ನಮ್ಮ ಸಂಬಂಧಿಕರು. ನ್ಯಾಯಾಲಯದ ಮುಂದೆ ಇರುವ 1 ರಿಂದ 6ನೇ ಆರೋಪಿತರು ನಮ್ಮ ಊರಿನವರು.

ಹಿಂದಿನ ವರ್ಷದಂದು ರಾತ್ರಿ 10 ಗಂಟೆ ಸುಮಾರಿಗೆ ನಾನು ಮತ್ತು ನನ್ನ ಗಂಡನಾದ ಚಾಸಾ-4 ಮತ್ತು ನನ್ನ ನಾದಿನಿ ಚಾಸಾ-5ರವರು ಮನೆಯಲ್ಲಿದ್ದಾಗ 1 ರಿಂದ 6ನೇ ಆರೋಪಿತರೆಲ್ಲರೂ ನಮ್ಮ ಮನೆಗೆ ಬಂದು ನನಗೆ ಮತ್ತು ಚಾಸಾ-4ರವರಿಗೆ ಮನೆಯಿಂದ ಹೊರ ತಂದು 1 ಮತ್ತು 6ನೇ ಆರೋಪಿತರು ನನ್ನ ತಲೆಗೆ ಸೆಂಟ್ರೆಂಗ ಕಟ್ಟಿಗೆಯಿಂದ ಹೊಡೆದಿರುತ್ತಾರೆ. 1ನೇ ಆರೋಪಿ ಚಾಸಾ-4ರವರಿಗೆ ತಮ್ಮ ಕೈಯಿಂದ ಬೆನ್ನಿಗೆ ಹೋಡೆದಿರುತ್ತಾರೆ. ನಂತರ 1ನೇ ಆರೋಪಿ ನನ್ನ ಗಂಡನಾದ ಚಾಸಾ-4ರವರಿಗೆ ಕರೆ ಮಾಡಿ ನಿನ್ನ ಹೆಂಡತಿಯೊಂದಿಗೆ ಮಲಗಿಕೊಳ್ಳುತ್ತೇನೆ ಎಂದು ಕೆಟ್ಟದಾಗಿ ಮಾತನಾಡಿರುತ್ತಾನೆ.

ರಾತ್ರಿ 10 ರಿಂದ 11 ಗಂಟೆಗೆ ನಾನು ದೂರು ನೀಡಲು ಸುಲೇಪೇಟ ಪೋಲಿಸ ಠಾಣೆಗೆ ಹೋಗಿರುತ್ತೇನೆ. ಅಲ್ಲಿ ನನ್ನ ದೂರನ್ನು ಪಡೆಯದೇ ಇರುವ ಕಾರಣ ಗುಲಬರ್ಗಾದ ಡಿ.ಸಿ. ಕಛೇರಿಗೆ ಹೋಗಿರುತ್ತೇನೆ ಅಲ್ಲಿ ಹೊದಾಗ ನನ್ನ ದೂರನ್ನು ಪಡೆದಿರುತ್ತಾರೆ.

ರುಸ್ತಾಂಪುರ ತಾಂಡಾದಲ್ಲಿ ಗುಡಿಯ ಹತ್ತಿರ ನಮಗೆ ಸೇರಿರುವ ಒಂದು ಹಳೆಯ ಮನೆ ಇದೆ. ಸದರಿ ಮನೆಯ ಜಾಗ ಬೇಕು ಎಂದು ಆರೋಪಿತರು ಈ ರೀತಿ ಕೃತ್ಯ ಎಸಗಿದ್ದಾರೆ. ಘಟನೆಯಾಗಿ 2 ದಿನಗಳ ನಂತರ ನ್ಯಾಯಾಲಯಕ್ಕೆ ಬಂದು ಅರ್ಜಿಯನ್ನು ಸಲ್ಲಿಸಿದ್ದೇನೆ. ನಾನು ಸಲ್ಲಿಸಿದ ಅರ್ಜಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಆರೋಪಿತರು ನಮಗೆ ಜಾಗ ಕೋಡುವುದಿಲ್ಲ ಎಂದು ಹೇಳಿದ ಕಾರಣ ನ್ಯಾಯಾಲಯಕ್ಕೆ ಬಂದು ದೂರನ್ನು ಸಲ್ಲಿಸಿರುತ್ತೇನೆ. ನನಗೆ ಓದಲು ಮತ್ತು ಬರೆಯಲು ಬರದೇ ಇರುವ ಕಾರಣ ನಿಪಿ-1 ರಲ್ಲಿರುವ ಸಂಗತಿಗಳು

ನನಗೆ ಗೊತ್ತಿಲ್ಲ. ಈಗ ನೋಡುತ್ತಿರುವ 2 ದಾಖಲೆಗಳಲ್ಲಿರುವ ಸಹಿಗಳು ನನ್ನದೆ. ಸದರಿ ದಾಖಲೆಗಳನ್ನು ನಿಪಿ-2 ಮತ್ತು 3 ಎಂದು ಮತ್ತು ಅವುಗಳಲ್ಲಿರುವ ನನ್ನ ಸಹಿಗಳನ್ನು ನಿಪಿ-2(ಎ) ಮತ್ತು ನಿಪಿ-3(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗಳನ್ನು ಆರೋಪಿತರು ನಮಗೆ ಹಲ್ಲೆ ಮಾಡಿದ್ದಾರೆ ಎಂದು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ.

ನನಗೆ ಹಲ್ಲೆ ಮಾಡಿರುವ ಸ್ಥಳವನ್ನು ನೋಡಿದರೆ ಗುರುತಿಸುತ್ತೇನೆ. ಈಗ ನೋಡುತ್ತಿರುವ ಭಾವಚಿತ್ರಗಳಲ್ಲಿರುವ ಸ್ಥಳದಲ್ಲಿ ಆರೋಪಿತರು ನಮಗೆ ಹಲ್ಲೆ ಮಾಡಿರುತ್ತಾರೆ. ಸದರಿ 4 ಭಾವಚಿತ್ರಗಳನ್ನು ನಿಪಿ-4 ರಿಂದ 7 ಎಂದು ಗುರುತಿಸಲಾಯಿತು. ನನಗೆ ಹಲ್ಲೆ ಮಾಡಲು ಬಳಸಿದ ಬಡಿಗೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಒಂದು ಬಡಿಗೆಯನ್ನು ತೋರಿಸಿ ಕೇಳಿದಾಗ ಸಾಕ್ಷಿ ಅದರಿಂದ ಹಲ್ಲೆ ಮಾಡಿಲ್ಲ ಮತ್ತು ಸೆಂಟ್ರಿಂಗ ಕಟ್ಟಿಗೆಯಿಂದ ಹಲ್ಲೆ ಮಾಡಿದ್ದಾರೆ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ದೂರಿಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಪೋಲಿಸರು ಪ್ರಕರಣ ದಾಖಲಿಸದೇ ಇರುವ ಕಾರಣ ನ್ಯಾಯಾಲಯಕ್ಕೆ ಬಂದು ದೂರನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ಪೋಲಿಸರಿಗೆ ಹಾಗೂ ಡಿ.ಸಿ. ಕಛೇರಿಗೆ ನೀಡಿರುವ ದೂರಿನ ಪ್ರತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿ. 1ನೇ ಆರೋಪಿ ಚಾಸಾ-4ರವರಿಗೆ ಕರೆಮಾಡಿ ಲಂಬಾಣಿ ಭಾಷೆಯಲ್ಲಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಎಂದರೆ ಸರಿ. ಈಗ ನೋಡುತ್ತಿರುವ ಬಡಿಗೆಯಿಂದಲೇ ಆರೋಪಿತರು ಹಲ್ಲೆ ಮಾಡಿದ್ದಾರೆ ಎಂದು ಸೂಚಿಸಿದಾಗ ಸಾಕ್ಷಿ ಸೆಂಟ್ರಿಂಗ ಬಡಿಗೆಯಿಂದ ಹಲ್ಲೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಿನಾಂಕ 20-06-2023 ರಂದು ನಾನು ಕಮ್ಯೂನಿಟಿ ಹಾಲನಲ್ಲಿ ಇದ್ದಾಗ ಜಗಳವಾಗಿರುತ್ತದೆ ಎಂದರೆ ಸರಿ. ಆಗ ಚಾಸಾ-5 ರಿಂದ 8ರವರು ಜಗಳವನ್ನು ಬಿಡಿಸಿರುತ್ತಾರೆ ಎಂದರೆ ಸಾಕ್ಷಿ ಚಾಸಾ-5 ರವರು ಮಾತ್ರ ಇದ್ದರು ಮತ್ತು ಚಾಸಾ-6 ರಿಂದ 8ರವರು ಸ್ಥಳದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. 1ನೇ ಆರೋಪಿ ನನ್ನ ಗಂಡನಿಗೆ ಕರೆಮಾಡಿ ನಿನ್ನ ಹೆಂಡತಿಯೊಂದಿಗೆ ನನ್ನ ಸಂಬಂಧವಿದೆ ಅದರ ವಿಡಿಯೋ ಸಹ ಇದೆ ಎಂದು ಹೇಳಿರುತ್ತಾನೆ. 2ನೇ ಆರೋಪಿ ನನ್ನ ಕುಬಸಾ ಹಿಡಿದು ಎಳೆದಿರುತ್ತಾನೆ ಎಂದರೆ ಸರಿ. 3 ಮತ್ತು 4ನೇ ಆರೋಪಿತರು ಕೈ ಮುಷ್ಟಿ ಮಾಡಿ ನನ್ನ ಎದೆಗೆ ಹೊಡೆದಿರುತ್ತಾರೆ ಎಂದರೆ ಸರಿ. 4 ರಿಂದ 6ನೇ ಆರೋಪಿತರು ಚಾಸಾ-4ರವರಿಗೆ ನೆಲಕ್ಕೆ ಉರುಳಿಸಿ ಕಾಲಿನಿಂದ ಒದ್ದಿರುತ್ತಾರೆ ಎಂದರೆ ಸರಿ. ಆರೋಪಿತರು ನನ್ನ ಗಂಡನಿಗೆ ನಿನ್ನ ಹೆಂಡತಿಗೆ ಮಾನಭಂಗ ಮಾಡುತ್ತೇವೆ ಎಂದು ಕರೆಯಲ್ಲಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ.

ಆರೋಪಿತರು ನನ್ನ ಗಂಡನಿಗೆ ನೀನು ಮರ್ಯಾದಸ್ಥನಿದ್ದರೆ ನಿನ್ನ ಹೆಂಡತಿಯೊಂದಿಗೆ ಇರಬಾರದು

ಮತ್ತು ವಿಷ ಕುಡಿದು ಸಾಯಬೇಕು ಎಂದು ಹೇಳುತ್ತಿದ್ದರು ಎಂದರೆ ಸರಿ. 1ನೇ ಆರೋಪಿ ಈ ರೀತಿ ಹೇಳಿದ ಕಾರಣ ನನ್ನ ಗಂಡ ಈಗಲೂ ಸಹ ನನ್ನ ಮೇಲೆ ಅನುಮಾನ ಮಾಡುತ್ತಾರೆ ಎಂದರೆ ಸರಿ.

ಆಸ್ಪತ್ರೆಗೆ ಹೋಗಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಘಟನೆಯಾದ ದಿನದಂದೆ ರಾತ್ರಿ 11 ಗಂಟೆ ಸುಮಾರಿಗೆ ಸುಲೇಪೇಟ ಸರಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದಿದ್ದೇನೆ.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ NCH ವಕೀಲರಿಂದಃ</u>**

ರುಸ್ತಾಂಪುರ ತಾಂಡಾದಲ್ಲಿರುವ ಮನೆಯ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ. ಸದರಿ ಮನೆಯ ಪೂರ್ವಕ್ಕೆ ಸಿಸಿ ರಸ್ತೆ ಇದೆ, ಪಶ್ಚಿಮಕ್ಕೆ ನನ್ನ ಬಾವನಾದ ಅನೀಲರವರ ಮನೆ ಇದೆ, ಉತ್ತರಕ್ಕೆ ರಸ್ತೆ ಹಾಗೂ ಅಣದೂರರವರ ಮನೆ ಇದೆ ಮತ್ತು ದಕ್ಷಿಣಕ್ಕೆ ಸೇವಾಲಾಲ ದೇವಸ್ಥಾನವಿದೆ. ಸದರಿ ಮನೆಯಲ್ಲಿ ಒಂದು ಕೋಣೆ ಇದೆ. ಡಿ.ಸಿ. ಕಛೇರಿಗೆ ಹೋದಾಗ ಪ್ರಕರಣ ದಾಖಲಿಸಿರುತ್ತಾರೆ ಎಂದು ನೀವು ಹೇಳಿದ್ದಿರಿ ಹಾಗಿದ್ದರೆ ಮತ್ತೆ ನ್ಯಾಯಾಲಯಕ್ಕೆ ಬಂದು ಯಾವ ಕಾರಣಕ್ಕಾಗಿ ಅರ್ಜಿ ಸಲ್ಲಿಸಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಡಿ.ಸಿ. ಕಛೇರಿಗೆ ಹೋಗಿದ ನಂತರ ಮತ್ತೆ ಠಾಣೆಗೆ ಹೋದಾಗ ಅವರು ಪ್ರಕರಣ ದಾಖಲಿಸದೇ ಇರುವ ಕಾರಣ ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದು ನುಡಿಯುತ್ತಾರೆ. ನಿಪಿ-5 ರಲ್ಲಿರುವ ಮನೆ ನನಗೆ ಸೇರಿದ್ದು. ಸದರಿ ಮನೆಯನ್ನು ಯಾರು ನಿರ್ಮಾಣ ಮಾಡಿದ್ದಾರೆ ಎಂದು ಪ್ರಶ್ನಿಸಿದಾಗ ಸಾಕ್ಷಿ ನನ್ನ ಮಾವನ ತಂದೆ ನಿರ್ಮಾಣ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಿಪಿ-5 ರಲ್ಲಿರುವ ಕಟ್ಟಡ ಮನೆ ಅಲ್ಲ ಮತ್ತು ಧರ್ಮಶಾಲೆ ಇರುತ್ತದೆ ಎಂದರೆ ಸರಿಯಲ್ಲ. ಧರ್ಮಶಾಲೆ ಹತ್ತಿರ ಘಟನೆಯಾಗಿರುತ್ತದೆ ಎಂದು ದೂರಿನಲ್ಲಿ ಉಲ್ಲೇಖವಿದೆ ಎಂದರೆ ಸಾಕ್ಷಿ ನಾನು ಆ ರೀತಿ ಬರೆಸಿಲ್ಲ ಎಂದು ನುಡಿಯುತ್ತಾರೆ. ಧರ್ಮಶಾಲೆಯಲ್ಲಿ ನಾನು ವಾಸವಿದ್ದೇನೆ ಎಂದು ದೂರನಲ್ಲಿ ಉಲ್ಲೇಖವಿದೆ ಎಂದರೆ ಸಾಕ್ಷಿ ಹಳೆ ಮನೆಯಲ್ಲಿ ವಾಸವಿದ್ದೇನೆ ಎಂದು ಬರೆಸಿದ್ದೇನೆ ಎಂದು ನುಡಿಯುತ್ತಾರೆ.

ನಿಪಿ-1 ರ ದೂರನ್ನು ನಮ್ಮ ವಕೀಲರ ಮುಖಾಂತರ ಸಲ್ಲಿಸಿದ್ದೇನೆ ಎಂದರೆ ಸರಿ. ನಿಪಿ-1 ರ ಸಂಗತಿಗಳನ್ನು ಸತ್ಯವಿರುತ್ತವೆ ಎಂದು ಪ್ರಮಾಣ ಪತ್ರ ಸಹ ಸಲ್ಲಿಸಿದ್ದೇನೆ ಎಂದರೆ ಸರಿ.

ತಾಲ್ಲೂಕ ಪಂಚಾಯಿತಿ BEO ರವರು ನನ್ನ ಮಾವ ಎಂದರೆ ಸರಿ. ನಿಪಿ-5ರಲ್ಲಿರುವ ಕಟ್ಟಡ ಸೇವಾಲಾಲ ಮತ್ತು ಜಗದಂಬಾ ದೇವಸ್ಥಾನದ ಟ್ರಸ್ಟರವರಿಗೆ ಸಮುದಾಯದ ಕಾರ್ಯಕ್ರಮಗಳನ್ನು ಮಾಡಲು ಸರಕಾರ ಅದನ್ನು ಮಂಜೂರು ಮಾಡಿರುತ್ತದೆ ಎಂದರೆ ಸರಿಯಲ್ಲ. ಸದರಿ ಮನೆ ನನಗೆ ಸಂಬಂಧಪಟ್ಟಿದ್ದು ಇರುತ್ತದೆ ಎಂದು ಅಥವಾ ನನ್ನ ಹೆಸರಿಗೆ ವರ್ಗಾವಣೆ ಮಾಡಲು ಯಾವುದೇ ಅರ್ಜಿಯನ್ನು ನಾನು ಸಲ್ಲಿಸಿಲ್ಲ. ಈಗಲೂ ಸಹ ಜಾಗ ಹಾಗೂ ಮನೆ ಜಗದಂಬಾ ಟ್ರಸ್ಟರವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ನಾನು ಅಕ್ರಮವಾಗಿ ಕಟ್ಟಡವನ್ನು ಕಬ್ಜ ಮಾಡಿದ್ದೇನೆ ಎಂದು ಗ್ರಾಮಸ್ಥರು ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಅರ್ಜಿಯ ಮೇಲೆ ತಹಸೀಲ್ದಾರರು EO ರವರಿಗೆ ಪತ್ರವನ್ನು ಬರೆದಿರುತ್ತಾರೆ ಎಂದರೆ ಸರಿ. ಅದರಂತೆ EO ರವರು ಹಾಗೂ ಅಧಿಕಾರಿಗಳು ಸ್ಥಳವನ್ನು ಪರಿಶೀಲಿಸಿರುತ್ತಾರೆ

ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಆ ದಿನ ಮನೆಯಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಆ ದಿನ EO ರವರು ಪರಿಶೀಲಿಸಿದ ಕಟ್ಟಡ ಈಗ ನೋಡುತ್ತಿರುವ ಭಾವಚಿತ್ರದಲ್ಲಿ ಇದೆ ಎಂದರೆ ಸರಿ. ಸಾಕ್ಷಿ ಒಪ್ಪಿಕೊಂಡ ಭಾವಚಿತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಭಾವಚಿತ್ರದ ಪ್ರತಿಯಲ್ಲಿರುವ ದೇವಸ್ಥಾನದ ಪಕ್ಕದ ಮನೆ ವಿವಾದಿತ ಮನೆಯಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಒಪ್ಪಿಕೊಂಡ ಭಾವಚಿತ್ರದ ಪ್ರತಿಯನ್ನು ನಿಡಿ-2 ಎಂದು ಗುರುತಿಸಲಾಯಿತು.

ದಿನಾಂಕ 13-02-2025 ರಂದು ಟ್ರಸ್ಟರವರು EO ರವರಿಗೆ ಒಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಗ್ರಾಮ ಪಂಚಾಯಿತಿ ಕಾರ್ಯಾಲಯ ಕನಕಪುರರವರು ಧರ್ಮಶಾಲೆಯೂ ಸಾರ್ವಜನಿಕ ಆಸ್ತಿಯಾಗಿದ್ದು ಮತ್ತು ಅದರ ಮಾಲೀಕತ್ವ ಗ್ರಾಮ ಪಂಚಾಯಿತಿ ಕನಕಪುರ ಹೊಂದಿರುತ್ತದೆ ಎಂದು ದೃಢಿಕರಣ ಪತ್ರ ನೀಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಚಾಸಾ-8 ರವರು ನನ್ನ ಮಾವನ ತಾಯಿ. ಚಾಸಾ-8ರವರು ಮೊದಲು ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿದ್ದರು ಎಂದರೆ ಸರಿ. ನಮ್ಮ ಕುಟುಂಬದಲ್ಲಿ ಪಂಚಾಯಿತಿಯ ಸದಸ್ಯರು ಇದ್ದಾರೆ ಎಂದರೆ ಸರಿ. ಸರಕಾರಿ ಕಟ್ಟಡವನ್ನು ಗ್ರಾಮಸ್ಥರಿಗೆ ಬೇದರಿಸಿ ರಾಜಕೀಯ ಪ್ರಭಾವ ಬೀರಿ ಕಾನೂನು ಬಾಹಿರವಾಗಿ ಕಟ್ಟಡವನ್ನು ಕಬ್ಜ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಅತ್ತೆ ಮಾವನ ಹೆಸರಿನಲ್ಲಿ ಊರಿನಲ್ಲಿ ಬೇರೆ ಮನೆಗಳು ಇವೆ ಎಂದರೆ ಸರಿಯಲ್ಲ. ರುಸ್ತಾಂಪುರ ತಾಂಡಾದಲ್ಲಿ ನನ್ನ ಅತ್ತೆ ಮಾವನ ಹೆಸರಿನಲ್ಲಿ ದೊಡ್ಡ ಮನೆ ಸಹ ಇದೆ ಎಂದರೆ ಸರಿಯಲ್ಲ.

ಆರೋಪಿತರೆಲ್ಲರೂ ಬಂದು ಇದು ಸರಕಾರದ ಜಾಗವಿದೆ ಬಿಟ್ಟುಕೊಡಿ ಎಂದು ಕೇಳಿರುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ 1ನೇ ಆರೋಪಿ ಗ್ರಾಮದಲ್ಲಿ ಪಂಚಾಯಿತಿ ಮಾಡುತ್ತಾನೆ ಎಂದರೆ ಸರಿ. 1ನೇ ಆರೋಪಿ ಗ್ರಾಮದಲ್ಲಿ ಒಳ್ಳೆಯ ಪಂಚಾಯಿತಿ ಮಾಡುತ್ತಾನೆ ಎಂದರೆ ಸರಿಯಲ್ಲ. 1ನೇ ಆರೋಪಿಗೆ ಸಿಕ್ಕಿ ಹಾಕಲು ಸುಳ್ಳು ದೂರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ಗ್ರಾಮಕ್ಕೆ ಬಂದು ವಿಚಾರಿಸಿದಾಗ ಯಾವುದೇ ಕೃತ್ಯ ಆಗಿರುವುದು ಕಂಡು ಬರದೇ ಇರುವ ಕಾರಣ ಪ್ರಕರಣ ದಾಖಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಘಟನೆಯಾಗದೇ ಇದ್ದರು ಸಹ ಆರೋಪಿತರಿಗೆ ಸತಾಯಿಸಲು ನ್ಯಾಯಾಲಯಕ್ಕೆ ಬಂದು ಸುಳ್ಳು ದೂರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿರುವ ಸಾಕ್ಷಿದಾರರೆಲ್ಲರೂ ನನ್ನ ಹತ್ತಿರದ ಸಂಬಂಧಿಕರು ಎಂದರೆ ಸರಿ.

ನಾನು ಮನೆಯಲ್ಲಿದ್ದಾಗ ಆರೋಪಿತರೆಲ್ಲರೂ ಬಂದು ನಮಗೆ ಹಲ್ಲೆ ಮಾಡಿರುವ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಹಲ್ಲೆ ಮಾಡಲೂ ಬಳಸಿದ ಕಟ್ಟಿಗೆಯನ್ನು ನಾನು ಪೋಲಿಸರಿಗೆ ತೋರಿಸಿಲ್ಲ. ಘಟನೆಯಾದಾಗ ನನ್ನ ಗಂಡನಿಗೆ ಯಾವುದೇ ಗಾಯವಾಗಿಲ್ಲ ಮತ್ತು ನನ್ನ ಗಂಡ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ. 2 ದಿನಗಳ ನಂತರ ಆರೋಪಿತರು ಮತ್ತೆ ಬಂದು ಹಲ್ಲೆ ಮಾಡಿದ್ದಾರೆ ಎಂದು ನನ್ನ ದೂರಿನಲ್ಲಿ

ಉಲ್ಲೇಖವಿಲ್ಲ. ಯಾವ ದಿನಾಂಕದಂದು ಘಟನೆಯಾಗಿದೆ ಎಂದು ನನಗೆ ನೆನಪಿಲ್ಲ. ನಾನು ವೈದ್ಯರಿಗೆ ಗಾಯದ ಪ್ರಮಾಣ ಪತ್ರ ನೀಡಲು ವಿನಂತಿಸಿಕೊಂಡಾಗ ಅವರು ನೀಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಯಾವುದೇ ಗಾಯ ಆಗದೇ ಇದ್ದರು ಸಹ ವೈದ್ಯರಿಂದ ಸುಳ್ಳು ಗಾಯದ ಪ್ರಮಾಣ ಪತ್ರ ಪಡೆದಿದ್ದೇನೆ ಎಂದರೆ ಸರಿಯಲ್ಲ.

ಯಾವ ಸಂಖ್ಯೆಯಿಂದ ಕರೆ ಬಂದಿರುವ ಬಗ್ಗೆ ಮತ್ತು ಯಾವ ಸಂಖ್ಯೆಗೆ ಕರೆ ಬಂದಿರುವ ಬಗ್ಗೆ ಪೋಲಿಸರಿಗೆ ಹೇಳಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಪೋಲಿಸರು ಈ ಪ್ರಕರಣದಲ್ಲಿ ಯಾವುದೇ ಪೋನನ್ನು ಜಪ್ತಿ ಮಾಡಿಲ್ಲ. ಸರಕಾರಿ ಕಟ್ಟಡವನ್ನು ಕಬ್ಜ ಮಾಡಲು ಆರೋಪಿತರ ವಿರುದ್ದ ಸುಳ್ಳು ದೂರನ್ನು ಸಲ್ಲಿಸ್ಸಿದೇನೆ ಎಂದರೆ ಸರಿಯಲ್ಲ. ಈ ಪ್ರಕರಣವನ್ನು ನನಗೆ ಮನೆ ಹಾಗೂ ಜಾಗ ಬೇಕು ಹಾಗೂ ಆರೋಪಿತರಿಗೆ ಶಿಕ್ಷೆಯಾಗಬೇಕು ಎಂದು ಸಲ್ಲಿಸಿದ್ದೇನೆ. ಮನೆ ಹಾಗೂ ಜಾಗ ಬೇಕು ಎಂದು ಸರಕಾರದ ವಿರುದ್ದ ನಾನು ಯಾವುದೇ ದಾವೆಯನ್ನು ಸಲ್ಲಿಸಿಲ್ಲ. ಆರೋಪಿತರಿಗೆ ಸತಾಯಿಸಲು ನಾನು ಹಾಗೂ ನನ್ನ ಕುಟುಬಂಸ್ಥರು ಸುಳ್ಳು ದೂರನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಹಲ್ಲೆ ಮಾಡಿರುವ ಬಗ್ಗೆ, ಕುಬಸಾ ಹಿಡಿದು ಎಳೆದಿರುವ ಬಗ್ಗೆ ಮತ್ತು ಅವಾಚ್ಯ ಶಬ್ದಗಳಿಂದ ಬೈದಿರುವ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕುಬಸಾವನ್ನು ಪೋಲಿಸರು ಜಪ್ತಿ ಮಾಡಿಲ್ಲ ಮತ್ತು ನಾನು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಪ್ರಕರಣ ದಾಖಲಿಸಿದ ನಂತರ ಪೋಲಿಸರು ನನ್ನ ಯಾವುದೇ ಹೇಳಿಕೆಯನ್ನು ಪಡೆದಿಲ್ಲ. ಘಟನೆ ಸ್ಥಳದಲ್ಲಿ ಘಟನೆಯಾಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹಿರಿಯರು ಕಟ್ಟಡ ಕಟ್ಟಿಸಿರುತ್ತಾರೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

**ಮರುವಿಚಾರಣೆ: ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**